# ವಯಸ್ಸಾಯ್ತಾ?

"ರೀ ತಯ್ಯಾರಿ ಆಯ್ತಾ, ಇನ್ನೂ ಎಷ್ಟೊತ್ತು, ಕನ್ನಡಿ ಮುಂದೇನೆ ಅರ್ಧ ಆಯಸ್ಸು ಕಳೀತು" ಅಂತ ಅವಳು ಕೂಗುತ್ತಿದ್ದಳು, ನನ್ನ ಪಾಡಿಗೆ ನಾ ತಲೆ ಬಾಚುತ್ತಿದ್ದೆ. ಎನೂ ಉತ್ತರ ಬರದಿದ್ದಾಗ, ಬಾಗಿಲು ತಳ್ಳಿ ಒಳಗೇ ಬಂದಳು, ಡ್ರೆಸ್ಸಿಂಗ್ ಟೇಬಲ್ಲಿನ ಉದ್ದ ಕನ್ನಡಿಗೆ ಹೆಗಲು ತಾಕಿಸಿ ಆತು ಕೈಕಟ್ಟಿ ನಿಂತು, ದಿಟ್ಟಿಸಿ ನೋಡತೊಡಗಿದಳು, ನನ್ನಾಕೆ ನನ್ನ ಹಾಗೆ ನೋಡಿದರೇನು ಹೊಸದು, ಅದಕ್ಕೆ ನನ್ನ ಪಾಡಿಗೆ ನಾನು ಮುಂಗಾರು ಮಳೆಗೆ ನೆನೆದು ಮೆದುವಾದ ಭೂಮಿಯನ್ನು ನೇಗಿಲಿನಲ್ಲಿ ಹರವು ಮಾಡಿ ಗೆರೆ ಕೊರೆದಂತೆ ಊಳುತ್ತಿರುವ ರೈತನಂತೆ, ಸ್ನಾನ ಮಾಡಿ ನೆನೆದ ಕೂದಲಿನಲ್ಲಿ ಬೈತಲೆ ತೆಗೆಯುತ್ತ ಬಾಚುತ್ತಿದ್ದೆ.

"ರೀ... ಇರೋವೆ ನಾಲ್ಕು ಕೂದಲು ಅಲ್ಲಿ ಇಲ್ಲಿ ಅಂತ ಸ್ವಲ್ಪ, ಅವನ್ನೂ ಹೀಗೇ ಬಾಚ್ತಾ ಇದ್ರೆ, ಎಲ್ಲ ಉದುರಿಹೋಗಿ ಅಷ್ಟೇ ಮತ್ತೆ, ಕೂದಲಿನ ಸಸಿ ನೆಡಿಸಬೇಕಾಗುತ್ತೇ" ಅಂತಂದ್ಲು. "ಹಾಗೆ ಕೂದಲಿನ ನಾಟಿ ಕೂಡ ಮಾಡ್ತಾರೆ ನಿಂಗೆ ಗೊತ್ತಾ" ಅಂದೆ, "ಹೂಂ ನಾನು ಅದಕ್ಕೆ ಎನಾದ್ರೂ, ಈ ಥರ ಬಾಚಿ ಬಾಚಿ ಕಿತ್ತು ಹಾಕ್ತಿದೀರೊ ಎನೋ ಅಂತಾನೇ ಕೇಳಿದ್ದು" ಅಂದ್ಲು. "ನಾನು ನನ್ನ ಹೇರ್‌ಸ್ಟೈಲು, ನೀನು ನೀಳವೇಣಿ ಕತ್ತರಿಸಬೇಕಾದ್ರೆ, ನಾನು ಗುಂಡು ಹೊಡಿಸ್ತೀನಿ, ನಿಂಗೇನು" ಅಂದೆ "ರೀ ಗುಂಡುನಾ, ಪ್ಲೀಜ್ ಪ್ಲೀಜ್ ಮಾಡಿಸ್ರಿ ಹೇಗೆ ಕಾಣ್ತೀರಾ ನೋಡೊಣ" ಅಂತ ಹರಿಬಿದ್ದಳು, ಇದೊಳ್ಳೆ ಆಯ್ತಲ್ಲ ನಾನೇನು ಚೇಷ್ಟೆಗೆ ಹೇಳಿದ್ರೆ, ಇವಳು ಅದನ್ನೇ ಪಟ್ಟು ಹಿಡಿಯೋದಾ, "ಲೇ ಹೋಗೆ, ನಿಂದೊಳ್ಳೆ ಆಸೆ, ಹಾಗೇನಾದ್ರೂ ಮಾಡಿಸಿದ್ರೆ ಪಕ್ಕದಮನೆ ಪದ್ದು ನನ್ನ ಕಣ್ಣೆತ್ತಿ ಕೂಡ ನೋಡಲ್ಲ" ಅಂತ ಸಿಡುಕಿದೆ, "ನಾನೂ ಹಾಗಾಗಲಿ ಅಂತಾನೇ ಹೇಳಿದ್ದು, ನನ್ನ ತಮ್ಮನಿಗೆ ಕನ್ಯಾ ನೋಡೊಕೆ ಹೋದ್ರೆ ನಿಮ್ಮನ್ನೇ ವರ ಅನ್ಕೋತಾರೆ, ಹಾಗೆ ಟಿಪ್ ಟಾಪ್ ಆಗಿ ಬರ್ತೀರಾ, ಅದಕ್ಕೆ ಗುಂಡು ಹೊಡಿಸಿದ್ರೆ ಒಳ್ಳೇದೇ ಅಂತ ಹೇಳಿದ್ದು" ಅಂತ ಗೂಡಾರ್ಥ ಬಿಚ್ಚಿಟ್ಟಳು. ಒಳ್ಳೇ ಕ್ರಿಮಿನಲ್ ಪ್ಲಾನ ಇವಳ್ದು. "ಮತ್ತೆ ಅವನಿಗೆ ಕನ್ಯಾ ನೋಡೊಕೆ ಹೋಗೊದಾದ್ರೆ ಹೇಳು, ಹೊಸ ಡ್ರೆಸ್ ಕೊಂಡ್ಕೊಂಡು ಹಾಕೊಂಡು ಬರ್ತೀನಿ" ಅಂದೆ, "ನಿಮ್ಮನ್ನ ಕರೆದುಕೊಂಡು ಹೋದ್ರೆ ತಾನೇ" ಅಂತ ನನ್ನ ಪ್ಲಾನಗೆ ನೀರು ಬಿಟ್ಟಳು. ಬಾಚಣಿಕೆಯಲ್ಲಿ ಬಾಚಿದ್ದು ಸಾಕಾಗದೇ ಅವಳ ಮುಂದೆ ನಿಂತು ಕೈ ಬೆರಳಲ್ಲಿ ಮತ್ತೆ ಬಾಚಿ ಸರಿ ಮಾಡಿಕೊಂಡೆ, ಸಿಟ್ಟಿನಿಂದ "ಕನ್ನಡಿ ಅಲ್ಲಿದೆ" ಅಂದ್ಲು, "ನಿನ್ನ ಕಣ್ಣೇ ನನ್ನ ಕನ್ನಡಿ" ಅಂದದ್ದಕ್ಕೆ "ಸಾಕು ಡೈಲಾಗೆಲ್ಲ, ರೀ ಏನು ವಯಸ್ಸಾಯ್ತು, ಇನ್ನೂ ಏನು ನಿಮ್ದು" ಅಂತ ಬಯ್ದಳು, ತಟ್ಟನೇ ಎನೊ ಹೇಳಬೇಕೆನಿಸಿದ್ರೂ ಹೇಳಲಿಲ್ಲ, ಒಂದು ಪ್ರಶ್ನೆ ತಲೆ ಕೊರೆಯತೊಡಗಿತು, ನಿಜವಾಗ್ಲೂ ವಯಸ್ಸಾಯ್ತಾ?

ಮುಂಜಾನೆ ಹೊರಟಿದ್ದ ಗಡಿಬಿಡಿಯಲ್ಲಿ ಮರೆತಿದ್ದ ಯೋಚನೆ ಮತ್ತೆ ತಿರುಗಿ ಬಂದು ಮನದಲ್ಲಿ ಕೂತು ಕೂಗಾಡುತ್ತಿತ್ತು. ಅದನ್ನು ಸುಮ್ಮನಾಗಿಸಲು ಮತ್ತೆ ನಾ ಮಾತಿಗಿಳಿಯಬೇಕಿತ್ತು. ಅವಳು ಅದೇ ಡ್ರೆಸ್ಸಿಂಗ್ ಟೇಬಲ್ಲಿನ ಮುಂದೆ ತಾನು ಕೂತು ಕಿವಿಯೋಲೆ ಬಿಚ್ಚಿಡುತ್ತಿದ್ದಳು, ಆ ಓಲೆಯ ಪಿರಿಕಿ(ಸ್ಕ್ರಿವ್) ಅಲ್ಲೇ ಜಾಮ್ ಆಗಿರಬೇಕು, ಬಿಚ್ಚಲು ಒದ್ದಾಡುತ್ತಿದ್ದಳು, "ರೀ ನೋಡ್ರೀ ಏನಾಗಿದೆ, ಬಿಚ್ಚುತ್ತಿಲ್ಲ" ಅಂದ್ಲು. ಅದ್ಯಾವ ಸಿಟ್ಟಿನಲ್ಲಿ ತಿರುಗಿಸಿದ್ದಳೊ, ಬರುತ್ತಲೇ ಇಲ್ಲ, "ಕಿವಿ ಹರಿದೇ ಹೊರತೆಗೆಯಬೇಕೇನೊ" ಅಂದೆ. ನಾನೀಗ ಹರಿದೇ ತೆಗೆದುಬಿಡ್ತೀನಿ ಅನ್ನೊ ಹಾಗೆ ನೋಡಿದಳು, "ಅದಕ್ಕೇ ಮುಂಜಾನೆ ಬೇಡ ಅಂತ ಹೇಳಿದ್ದು, ಚೆನ್ನಾಗಿ ಕಾಣ್ತೀಯಾ ಅದನ್ನೇ ಹಾಕು ಅಂತ ದುಂಬಾಲು ಬಿದ್ದು ಹಾಕಿಸಿದ್ದು ನೀವು, ನೀವೇ ಹೇಗೆ ತೆಗೆಯುತ್ತೀರೋ ನೋಡಿ" ಅಂತ ಅದನ್ನು ನನ್ನ ತಲೆ ಮೇಲೆ ಹೊರಿಸಿದಳು. ನಾನೂ ಸಾಕಷ್ಟು ಸಾಹಸ ಮಾಡಿದೆ ಆ ಓಲೆ ನಾನು ಅವಳ ಕಿವಿಯಲ್ಲೇ ಚೆನ್ನಾಗಿ ಕಾಣ್ತೆದೀನಿ ಬರಲೊಲ್ಲೆ ಅಂತ. ಅದನ್ನು ಕೈಬಿಟ್ಟು ಅವಳ ತಲೆಗೂದಲಲ್ಲಿ ಹೇನು ಹುಡುಕಿ ಒರೆಯುವವರ ಹಾಗೆ ಏನೋ ಹುಡುಕತೊಡಗಿದೆ, "ರೀ ಕಿವಿಯೋಲೆ ಕಿವಿಯಲ್ಲಿ ಇರತ್ತೆ ತಲೆಯಲ್ಲಿ ಅಲ್ಲ" ಅಂತ ಸಿಡುಕಿದಳು, "ಅಲ್ಲಾ ವಯಸ್ಸಾಯ್ತು ಅಂತಿದ್ದೆಯಲ್ಲ, ನಿನಗೂ ವಯಸ್ಸಾಯ್ತು ಅಂತ ನರೆಕೂದಲು ಏನಾದ್ರೂ ಸಿಗುತ್ತಾ ಅಂತ ಹುಡುಕ್ತಾ ಇದೀನಿ" ಅಂದೆ. ಎನೋ ಮಾಡು ಅಂದ್ರೆ ಅದನ್ನ ಬಿಟ್ಟು ಇನ್ನೇನೊ ಮಾಡುತ್ತೀನಿ ಅನ್ನೊ ಮೊಂಡನಂತೆ ಅನಿಸಿರಬೇಕು, ನನ್ನ ಕೈ ಬಿಡಿಸಿ ತಾನು ಮತ್ತೆ ಪ್ರಯತ್ನಿಸಿದಳು ಆಗಲಿಲ್ಲ ಕೈಚೆಲ್ಲಿ ನನ್ನತ್ತ ಬುಸುಗುಡುತ್ತ ನೋಡುತ್ತ ಕೂತಳು. "ಇಂದೊಂದು ದಿನ ಇರಲಿ ಬಿಡು ನಾಳೆ ಬರಬಹುದು" ಅಂತ ಭರವಸೆ ಕೊಟ್ಟೆ, "ನಾಳೆ ಬರದಿದ್ದರೆ" ಅಂದ್ಲು, "ವಯಸ್ಸಾಗುತ್ತ ಕಿವಿ ಜೋತು ಬೀಳುತ್ತಲ್ಲ ಆಗ ಕಿತ್ತು ತೆಗೆದರಾಯ್ತು" ಅಂದೆ. "ನಂಗೊತ್ತು ಮುಂಜಾನೇ ವಯಸ್ಸಾಯ್ತು ಅಂತ ಅಂದ್ನಲ್ಲ ಅದಕ್ಕೆ ಈಗ ಸೇಡು ತೀರಿಸ್ಕೊಳ್ತಾ ಇದೀರಲ್ವಾ" ಅಂತ ಬೇಜಾರಾದಳು. "ಹಾಗೇನಿಲ್ಲ ಆದ್ರೂ ವಯಸ್ಸಾಯ್ತು ಅಂತ ಯಾಕೆ ಅಂದೆ" ಅಂತ ಕೇಳಿದೆ, "ಮತ್ತಿನ್ನೇನು ಮದುವೆ ಆಯ್ತು, ಮಕ್ಕಳು ಆಗೋ ವಯಸ್ಸಾಯ್ತು, ಇನ್ಯಾರು ನೋಡ್ತಾರೆ ಅಂತ ಹಾಗೆ ಹೇಳಿದೆ" ಅಂದ್ಲು. "ನಿಂಗೆಷ್ಟು ವಯಸ್ಸು" ಅಂದೆ **"ಅಯ್ಯೋ ಹುಡುಗಿ ವಯಸ್ಸು, ಹುಡುಗನ ಸಂಬಳ ಕೇಳಬಾರದ್ರಿ, ನಿಜ ಹೇಳಲ್ಲ"** ಅಂತ ನಕ್ಕಳು, "ನೀನೇನು ಹುಡುಗೀನಾ" ಅಂದೆ, ಇದೇನು ಇಂಥಾ ಪ್ರಶ್ನೇ ಅಂತನ್ನೊ ಹಾಗೆ ನೋಡಿ, "ನಿಮ್ಮಷ್ಟು ವಯಸ್ಸಾಗಿಲ್ಲ ನಂಗೆ, ನಿಮಗಿಂತ ಇನ್ನೂ ಮೂರು ವರ್ಷ ಚಿಕ್ಕೊಳೇ" ಅಂದ್ಲು, "ಮತ್ತೆ ಆಗಲೇ ವಯಸ್ಸಾಯ್ತು ಅಂತೆಲ್ಲ ಮಾತಾಡ್ತಾ ಇದೀಯ" ಅಂದೆ. "ನನ್ಯಾರು ನೋಡ್ತಾರೆ ಮದುವೆ ಆಯ್ತು, ಇಷ್ಟು ವರ್ಷ ಆಯ್ತು, ಅಂತ ಸುಮ್ನೇ ಹಾಗಂದಿದ್ದು" ಅಂತ ಸರಿಪಡಿಸಲು ನೋಡಿದ್ಲು. ನಾ ಬಿಟ್ಟರೆ ತಾನೇ...

"ವಯಸ್ಸು ಯಾರಿಗೆ ಆಗಲ್ಲ ಹೇಳು, ಹುಟ್ಟಿದಾಗಿಂದ ವಯಸ್ಸಾಗ್ತನೇ ಇದೆ, ವರ್ಷದ ಪುಟ್ಟ ಮಗು ಇದ್ದೆ, ಅಂತ ಹಾಗೇ ಇರ್ತೀನಾ ಹಾಗೇ ಬೆಳಿತಾ.." ನಡುವೆ ಅವಳು "ನೀವು ಪುಟಾಣಿ ಪಾಪು ಇರೊ ಫೊಟೊ ನೋಡಿದೀನ್ರೀ ಈಗ್ಲೂ ಹಾಗೆ ಇದ್ದಿದ್ರೆ, ಎತ್ಕೊಂಡು ನನ್ನ ಗಂಡ ಹೇಗಿದಾನೆ ನೋಡು ಕ್ಯೂಟ್ ಅಲ್ವಾ ಅಂತ ಎಲ್ರಿಗೂ ತೋರಿಸಬಹುದಿತ್ತು" ಅಂದ್ಲು ಎಲಾ ಇವಳಾ ಎನೇನು ಆಸೆ ಅಂತೀನಿ ಇವಳಿಗೆ, "ಪರವಾಗಿಲ್ಲ ಈಗ್ಲೂ ಎತ್ಕೊಬಹುದು ನಂಗೇನೊ ಬೇಜಾರಿಲ್ಲ" ಅಂದೆ, ಹುಬ್ಬು ಗಂಟಿಕ್ಕಿದಳು, ನಾ ಹುಬ್ಬು ಹಾರಿಸುತ್ತ ನಗುತ್ತಿದ್ದೆ. ಪುಟ್ಟ ಮಗುವಿನಂತೆ ಬಂದು ತೊಡೆಯೇರಿ ಕೂತಳು, "ಆಯ್ತಪ್ಪ ಈಗೇನು ನಿಮಗೆ ವಯಸ್ಸಾಗಿಲ್ಲ ಅಷ್ಟೆ ತಾನೇ" ಅಂತಂದಳು, "ವಿಷಯ ಬರೀ ಅದಲ್ಲ, ಯೋಚನೆ ಮಾಡು, ಮದುವೆ ಆಗ್ತಿದ್ದಂತೇ, ಏನೊ ಜೀವನದಲ್ಲಿ ಎಲ್ಲಾ ಮುಗಿದು ಹೋಯ್ತು, ಮಕ್ಕಳಾದರಂತೂ ಮುಗೀತು, ಇನ್ನೇನು ಯಮರಾಜ ಬಂದು ಕರೆದೊಯ್ಯಲೇ ಬೇಕೆಂದು ಕಾಯುತ್ತಿರುವವರ ಹಾಗೆ ಆಡತೊಡುಗುತ್ತಾರೆ ಕೆಲವರು(ಆ ಕೆಲವರ ಬಗ್ಗೇನೇ ನಾ ಹೇಳುತ್ತಿರುವುದು), ಒಂಥರಾ ಉದಾಸೀನತೆ ತಂದುಕೊಂಡು, ಜಿಗುಪ್ಸೆಗೆ ಇಳಿದುಬಿಡ್ತಾರೆ, ಯಾಕೆ ಅಂತ ನನ್ನ ಪ್ರಶ್ನೆ, ಅದೇ ಮೊದಲಿನ ಜೀವನದ ಉತ್ಸಾಹ ಯಾಕೆ ಉಳಿಸಿಕೊಳ್ಳಬಾರದು" ಅಂದೆ, "ಹೌದಲ್ವಾ ಮದುವೆ ಆದ ಮೇಲೆ ಇನ್ಯಾರು ನೋಡ್ತಾರೆ ಅಂತ ಹಾಗೆ ಆ ಉದಾಸೀನತೆ ಬರತ್ತೆರೀ" ಅಂದ್ಲು, "ಯಾರೋ ಯಾಕೆ ಅವರ ಪತಿ, ಪತ್ನಿಯೇ ನೋಡಲ್ವೇ ಅದಕ್ಕಾದರೂ..." ಅಂತಿದ್ದರೆ "ಮದುವೆ ಆಯ್ತಲ್ಲ ಇನ್ನೇನು ಹೊಸ ಆಕರ್ಷಣೆ ಉಳಿದಿಲ್ಲ ಅಂತ ಹಾಗೆ ಮಾಡ್ತಾರೆ" ಅಂದ್ಲು "ಅದು ನಾವು ಅನ್ಕೊಳ್ಳೊದು ಅಷ್ಟೇ, ಅದು ನಮ್ಮನ್ನು ನಾವೇ ಆ ಉದಾಸೀನತೆಗೆ ತಳ್ಳಿಕೊಳ್ಳೊದು" ಅಂದೆ... ನಿಧಾನವಾಗಿ ಆ ಇನ್ನೊಂದು ಓಲೆ ಮತ್ತೆ ಕಿವಿಗೇರಿಸುತ್ತಿದ್ದಳು.

ನಾವೇ ಹೀಗೆ, ಎಲ್ಲ್ರೂ ಅಂತಲ್ಲ ಆದ್ರೆ ಬಹಳಷ್ಟು ಜನ, ಮದುವೆ ಆಯ್ತು ಇನ್ನೇನಪ್ಪಾ ಅಂತ, ಹೇಗೆ ಬೇಕೋ ಹಾಗಿರಲು ಶುರುವಿಡುತ್ತೇವೆ, ಕೇಳಿದ್ರೆ ಮದುವೆ ಆಯ್ತಲ್ಲ ಇನ್ಯಾರು ನೋಡೊರು? ಆದರೆ ಇಲ್ಲಿ ಈ ಮುಖದ ಮೇಲೆ ನಾಲ್ಕಿಂಚು ದಪ್ಪ ಮೇಕಪ್ಪು ಬಳಿದು, ತುಟಿಗೆ ರಂಗು ತೀಡಿ, ಹರೆಯದ ಹುಡುಗಿಯಂತೆ ಆಡುವವರೂ, ಇಲ್ಲ ಕೂದಲಿಗೆ ಬಣ್ಣ ಬಳಿದು, ಮೀಸೆ ತೆಗೆದು ಪೋಲಿ ಜೋಕು ಮಾಡುತ್ತ ತರುಣರಂತೆ ತೋರಿಸ್ಕೊಳ್ಳುವವರ ಬಗ್ಗೆ ನಾ ಹೇಳುತ್ತಿಲ್ಲ, ವಯಸ್ಸಿಗೆ ತಕ್ಕ ಯೋಗ್ಯವಾಗಿ ಬಟ್ಟೆ ಧರಿಸಿ, ಗೌರವಯುತರಾಗಿ ಕಾಣುವವರ ಬಗ್ಗೆ ಹೇಳುತ್ತಿರುವುದು. ನೀಟಾಗಿ ಇನ್ ಶರ್ಟ ಮಾಡಿ, ಹೊಂದಿಕೆಯಾಗುವ ತೊಡುಗೆ ಧರಿಸಿ, ಶಿಸ್ತಿನಿಂದ ಯಾಕೆ ಇರಬಾರದು, ಅದ ಬಿಟ್ಟು ಯಾವುದೊ ಶರ್ಟು, ಯಾವುದೊ ಪ್ಯಾಂಟೊ ಹಾಕಿ ಎತ್ತೆತ್ತಲೋ ತೊಳು ಮಡಚಿ, ಹೇಗೇಗೊ ಇದ್ದರೆ, ಕೆದರಿದ ಕೂದಲು ಬಿಟ್ಟು, ನೈಟಿಯಲ್ಲೇ ಮೇಲೆ ಒಂದು ದುಪಟ್ಟ ಹೊದ್ದು ಊರೆಲ್ಲ ತಿರುಗಿ ಬಂದರೆ ಯಾರೂ ಏನೂ ಕೇಳಲ್ಲ, ಯಾರಿಗೂ ಎನೂ ನಷ್ಟವಿಲ್ಲ, ಅದೇ ಉದಾಸೀನತೆ ನಮ್ಮನ್ನೇ ಆವರಿಸಿ, ಬೇಗ ಮುದುಕರಾಗಿಬಿಡುತ್ತೇವೆ, ಇಲ್ಲ ಹಾಗೆ ಆಡತೊಡುಗುತ್ತೇವೆ, ಅದೇ **ಎಷ್ಟೊ ಇಳಿವಯಸ್ಸಿನಲ್ಲಿರುವವರನ್ನು ನೋಡಿ ಎಷ್ಟು ಸರಳವಾಗಿ ಸಭ್ಯರಾಗಿ ಕಾಣುತ್ತಾರೆ, ಜೀವನದಲ್ಲಿ ಲವಲವಿಕೆಯಿಂದಿರುತ್ತಾರೆ. ಹಾಗೇ ನಾವ್ಯಾಕೆ ಇರಬಾರದು**, ಇದ್ದರೆ ನಮಗೆ ಒಳ್ಳೇದು.

ಮಾರನೇ ದಿನ, ಯಾವುದೋ ಮನೆ ಗೃಹ ಪ್ರವೇಶ ಸಮಾರಂಭವಿತ್ತು, ಹೊರಟು ತಯ್ಯಾರಾಗುತ್ತಿದ್ದಳು, "ಲೇ ಆಯ್ತೇನೆ, ಜಾಸ್ತಿ ಮೇಕಪ್ಪು ಮಾಡು ಅಂತ ನಾ ಹೇಳಿಲ್ಲ, ನೀಟಾಗಿರಲಿ ಅಂತ ಹೇಳಿದ್ದು" ಅಂತ ಚೀರುತ್ತಿದ್ದೆ, ಬಾಗಿಲು ತೆರೆದು ಹೊರಬಂದಳು, ಕ್ಷಣದಲ್ಲಿ ಸ್ತಂಭಿಭೂತನಾದೆ, ಜರಿ ದಡಿಯ ಹಸಿರು ಅಂಚಿನ ರೇಶಿಮೆ ಸೀರೆ ನೀಟಾಗಿ ತಿದ್ದಿ ತೀಡಿ ನೆರಿಗೆ ಹಾಕಿಯುಟ್ಟು, ಸೆರಗಿಗೆ ಪಿನ್ನು ಹಾಕಿ ಕಟ್ಟಿಟ್ಟು, ಹಿಂದಿನಿಂದೆಳೆದು ಕೈಲಿ ಹಿಡಿದಿದ್ದಳು ಪದರು ಪದರು ಹರಡುವಂತೆ, ಕೂದಲೆಳೆದು ಹಿಂದೆ ಕೂಡಿಸಿ ಕ್ಲಿಪ್ಪು ಹಾಕಿ ಬಂಧಿಸಿ, ಎರಡೇ ಎರಡು ಎಳೆ ಹೊರಗೆ ಹಾರಾಡಲು ಕಿವಿ ಮೇಲೆ ಸರಿಸಿಟ್ಟಿದ್ದಳು. ಮೂಗಿಗೆ ಮೂಗುತಿಯೊಂದಿಗೆ, ತುಟಿಗೆ ನಗು ಆಭರಣವಾಗಿಸಿದ್ದರೆ, ಕಿವಿಯೋಲೆ, ನಾನೂ ಇದ್ದೀನಿ ಅಂತ ಹೊಳೆಯುತ್ತಿತ್ತು. "ಏನು ಹಾಗೆ ನೋಡ್ತಾ ಇದೀರಾ, ಮೊದಲಸಾರಿ ನೋಡಿದ ಹಾಗೆ" ಅಂತ ನಾಚಿದಳು, ಕೆನ್ನೆಗೆ ಕೆಂಪಡರಿ ಇನ್ನೂ ಚೆಂದ ಕಾಣಿಸಿದಳು. ಕೈಗೆ ಸಿಕ್ಕ ಪೆನ್ನಿನಲ್ಲೇ ದೃಷ್ಟಿ ಬೊಟ್ಟು ಬರೆದೆ. ನಾನೂ ಒಳ ಹೋಗಿ ಗಡಿಬಿಡಿಯಲ್ಲಿ ಅವಳನ್ನು ನೋಡಿ ಅವ್ವಾಕ್ಕಾದ ಗುಂಗಿನಲ್ಲೇ ಕಪ್ಪು ಪ್ಯಾಂಟ್ಗೆ ಬಿಳಿ ಶರ್ಟ ಹಾಕಿ ಹೊರ ಬಂದೆ, "ರೀ ಕಲರ ಟೀವೀ ಪಕ್ಕ ಬ್ಲಾಕ್ ಆ್ಯಂಡ ವೈಟ್ ಟೀವೀ ಇಟ್ಟ ಹಾಗೆ ಕಾಣಿಸ್ತೀವಿ ಇಬ್ರೂ" ಅಂತ ನಗೆಯಾಡಿದವಳು ಬೀರು ಕಿತ್ತಾಕಿ ಅದೇನೋ ಮ್ಯಾಚಿಂಗ ಅಂತ ಬಟ್ಟೆ ಎತ್ತಿ ಕೊಟ್ಟಳು, ನಾನು ಬಾಚಿದ ಕೂದಲು, ಸ್ವಲ್ಪ ಊದಿ ಹಾರಿಸಿದಳು, ಎನೊ ಚೆನ್ನಾಗೇ ಕಾಣಿಸ್ತು, ಹಾಗೇ ಕಿವಿಯಲ್ಲಿ "ಮುಂಜಾನೆ, ಸ್ನಾನ ಮಾಡೊವಾಗ ಸಾಬೂನು ಹಚ್ಚಿದ್ದಕ್ಕೆ ಕಿವಿಯೋಲೆ ಬಿಚ್ಚಿ ಬಂತು, ಆದ್ರೆ ನೀವು ಚೆನ್ನಾಗಿ ಕಾಣಿಸ್ತೀನಿ ಅಂದ್ರಲ್ಲ ಅದಕ್ಕೆ ಮತ್ತೆ ಹಾಕಿದೀನೀ" ಅಂತ ಉಸುರಿದಳು, ಮತ್ತಷ್ಟು ಪುಳಕಗೊಂಡೆ. ಹೊರಗೆ ಬಂದು ಹೊರಡಲನುವಾಗುತ್ತಿದ್ದರೆ ಪಕ್ಕದ ಮನೆಯ ಪದ್ದುನ ಅರಳಿದ ಕಣ್ಣುಗಳೇ ಕನ್ನಡಿಯಾಗಿದ್ದವು ನಮಗೆ.

ಎನ್ರೀ ನನ್ನಾಕೇನಾ ಹಾಗೆ ಕಣ್ಣು ಕಣ್ಣು ಬಿಟ್ಟು ನೋಡ್ತಿದೀರಾ, ದೃಷ್ಟಿಯಾದೀತು! ಮತ್ತೆ ಮುಂದಿನ ವಾರ ಸಿಕ್ತೀವೀ, ಹೊರಡೋಣ್ವಾ...

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...